ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

**ಪ್ರಕಟಣೆಗಾಗಿ**

# ಶ್ರೀ ಸುತ್ತೂರು ಕ್ಷೇತ್ರ ಭಕ್ತಿ ಜ್ಞಾನದ ಸಂಸ್ಥಾನ

– ಡಾ. ಕೆ. ಅನಂತರಾಮು

ಶ್ರೀ ಸುತ್ತೂರು ಕ್ಷೇತ್ರವು ಭಕ್ತಿ ಜ್ಞಾನದ ಸಂಸ್ಥಾನ ಎಂದು ಮೈಸೂರಿನ ನಿವೃತ್ತ ಪ್ರಾಧ್ಯಾಪಕರಾದ ಡಾ.ಕೆ. ಅನಂತರಾಮುರವರು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಮೇ 20 ರಿಂದ 24ರವರೆಗೆ ಶ್ರೀ ನಿಜಗುಣ ಶಿವಯೋಗಿಗಳ 'ಪರಮಾರ್ಥಗೀತೆ' ಕೃತಿಯ ಬಗೆಗೆ ಏರ್ಪಡಿಸಿದ್ದ ಅಧ್ಯಯನ ಶಿಬಿರದ ಸಮಾರೋಪ ಭಾಷಣ ಮಾಡುತ್ತಾ ತಿಳಿಸಿದರು.

ಜಗತ್ತು ಜಡ, ದುಃಖ ಹಾಗೂ ಅಶಾಶ್ವತ. ಪರಮಾತ್ಮನೇ ಚೈತನ್ಯ, ಆನಂದ ಹಾಗೂ ಶಾಶ್ವತ. ಇಡೀ ಜಗತ್ತಿನ ಪ್ರತಿಯೊಂದು ಜೀವಿಯೂ ಪರಮಾತ್ಮನಿಂದಾಗಿದ್ದು, ಸೃಷ್ಟಿಯು ಪ್ರಕೃತಿಯೊಂದಿಗೆ ಲೀನವಾಗುತ್ತದೆ, ಎಲ್ಲಾ ಜೀವರಾಶಿಗಳಲ್ಲಿಯೂ ಪರಮಾತ್ಮನಿರುವುದರಿಂದ ನಾವೆಲ್ಲರೂ ಪರಮಾತ್ಮರೆ, ಪರಮಾತ್ಮ ಹಾಗೂ ಯೋಗಿ ಬೇರೆ ಅಲ್ಲ. ಯೋಗಿಯು ಸಚ್ಚಿದಾನಂದ ಸ್ವರೂಪ, ಜಗತ್ತಿನ ಬೇರೆ ಯಾವ ವಾಸನೆಯು ಅವನ ಸಾಮಿಪ್ಯ ಬರುವುದಿಲ್ಲ. ಸದ್ಗುರುವಿನ ಕೃಪೆಯಿಂದ ವಿಕಲ್ಪ ಸಮಾಧಿ ಸ್ಥಿತಿಯನ್ನು ತಲುಪಿ ನಿರ್ಮಲ ಆನಂದವನ್ನು ಪಡೆಯುತ್ತಾನೆ. ಜೀವಾತ್ಮನ ಸುಖ-ದುಃಖಗಳು ಪರಮಾತ್ಮನಿಗೆ ತಟ್ಟುವುದಿಲ್ಲ ಎಂದು ತಿಳಿದು ಭಗವಂತನಲ್ಲಿ ಲೀನನಾಗುತ್ತಾನೆ. ಅಧ್ಯಯನ ಶಿಬಿರವು ಶಿಬಿರಾರ್ಥಿಗಳಿಗೆ ಭಕ್ತಿ, ಜ್ಞಾನ, ಆರೋಗ್ಯ, ಆನಂದ, ಪ್ರವಾಸ, ಗುರುದರ್ಶನ, ಪುಣ್ಯಕ್ಷೇತ್ರ ದರ್ಶನ ಮೊದಲಾದ ದಶ ಲಾಭಗಳನ್ನು ನೀಡಿದೆ. ಸುತ್ತೂರಿನಲ್ಲಿ ಅನ್ನ ಬ್ರಹ್ಮ ಹಾಗೂ ಶಬ್ದ ಬ್ರಹ್ಮನ ವೈಭವವೇ ನಡೆಯಿತು. ಗುರು ಕಾರುಣ್ಯದಿಂದ ಎಲ್ಲರೂ ಆನಂದಮಯವಾಗಿದ್ದೆವು ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನವನ್ನು ಕರುಣಿಸುತ್ತಾ ಮೋಕ್ಷ ಸಾಧನೆಗೆ ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದನ್ನು ಗುರು ಮಾರ್ಗದರ್ಶನದಿಂದ ಅರಿಯಬೇಕು. ಮನಸ್ಸಿನ ರಾಗ-ದ್ವೇಷಗಳನ್ನು ತೊರೆದು ಮುಕ್ತವಾಗಿ ಬದುಕಬೇಕು. ಮಾಡುವ ಪ್ರತಿಯೊಂದು ಉತ್ತಮ ಕಾರ್ಯದಲ್ಲೂ ಭಗವಂತನನ್ನು ಕಾಣಬೇಕು. ವ್ಯಕ್ತಿಗೆ ವೈಯಕ್ತಿಕ ಸಾಧನೆಯು ಬಹಳ ಮುಖ್ಯವಾಗಿದ್ದು, ಕೇಳಿದ ಉತ್ತಮ ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು. ಈ ಅಧ್ಯಯನ ಶಿಬಿರವು ಮನಸ್ಸಿನ ಸಂಶಯಗಳಿಗೆ ಉತ್ತರ ಕಂಡುಕೊಳ್ಳಲು

ಸಹಾಯಕವಾಗಿದ್ದು, ಶ್ರೀ ನಿಜಗುಣ ಶಿವಯೋಗಿಗಳ 'ಪರಮಾರ್ಥಗೀತೆ' ಆಧ್ಯಾತ್ಮಿಕ ಸಾಧನೆಗೆ ದಾರಿದೀಪವಾಗಿದೆ ಎಂದು ನುಡಿದರು.

ಶಿಬಿರಾರ್ಥಿಗಳ ಪರವಾಗಿ ಕೆಸವತ್ತೂರು ಶ್ರೀ ಸಿದ್ಧಲಿಂಗೇಶ್ವರ ಮಠದ ಶ್ರೀ ಬಸವರಾಜೇಂದ್ರಸ್ವಾಮಿಗಳು, ಬೆಂಗಳೂರು ಸಿದ್ಧಾರೂಢ ಮಠದ ಮಾತೆ ಉಮಾಭಾರತಿ, ಶಿರಗುಪ್ಪದ ಶ್ರೀ ಬಸವಭೂಷಣಸ್ವಾಮಿಗಳು, ಜಮಖಂಡಿಯ ಶ್ರೀಮತಿ ಜ್ಞಾನಮಾಲ, ಶಹಾಪುರದ ಶ್ರೀ ಚೆನ್ನಾರೆಡ್ಡಿ, ಬೆಂಗಳೂರಿನ ಶ್ರೀಮತಿ ನಂದಿತಾ, ಮೈಸೂರಿನ ಶ್ರೀ ಎಂ. ಸೋಮೇಶ್ ಹಾಗೂ ಶ್ರೀಮತಿ ಶಾಂತ, ಧಾರವಾಡದ ಶ್ರೀಮತಿ ಲಲಿತಮ್ಮ ತಾಯಿ, ವಿಜಯಪುರದ ಯೋಗೇಶ್ವರಿ ಮಾತಾಜಿರವರುಗಳು ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ, ಈ ರೀತಿಯ ಅಧ್ಯಯನ ಶಿಬಿರವು ಸಾಧಕರುಗಳಿಗೆ ಸಾಧನೆಯ ಮಾರ್ಗದಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿರುತ್ತದೆ ಎಂದು ತಿಳಿಸುತ್ತಾ ಶಿಬಿರವನ್ನು ಅತ್ಯಂತ ವ್ಯವಸ್ಥಿತವಾಗಿ ಏರ್ಪಡಿಸಿರುವುದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಶ್ರೀ ಎಸ್. ನಂದೀಶ್‌ರವರು ಶಿಬಿರದ ವರದಿ ಮಂಡಿಸಿದರು. ಚುಂಚನಹಳ್ಳಿ ಮಠದ ಶ್ರೀ ಚನ್ನಬಸವಸ್ವಾಮಿಗಳು ಸ್ವಾಗತಿಸಿದರು, ಶ್ರೀ ಅಂದಯ್ಯ ಶಿರೂರಮಠ ವಂದಿಸಿದರು. ಶ್ರೀಮತಿ ಮಮತಾ ಶಿವಪ್ರಸಾದ್ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಬಿ. ಮಾದಪ್ಪ ಕಾರ್ಯಕ್ರಮ ನಿರೂಪಿಸಿದರು.

ಶಿಬಿರದಲ್ಲಿ ಕರ್ನಾಟಕ, ಕೇರಳ ಹಾಗೂ ಮಹಾರಾಷ್ಟ್ರದಿಂದ ಆಗಮಿಸಿರುವ 183 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.



**ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 24 ರಂದು ಅಧ್ಯಯನ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ಕರುಣಿಸುತ್ತಿರುವುದು. ಡಾ.ಕೆ. ಅನಂತರಾಮು ಹಾಗೂ ಶಿಬಿರಾರ್ಥಿಗಳಿದ್ದಾರೆ.**